INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-6, Issue -3, May--June, 2024,
PageNo,55- 61
Peer -Reviewed, Refereed Journal

# ‘ಕಾಟೇರ’ ದುಷ್ಟ ಮತ್ತು ದಮನಿತ ದಲಿತ ವರ್ಗಗಳ ನಡುವಿನ ಸಂಘರ್ಷದ ಕಥೆ

ನಟರಾಜು ಎಂ.[1]
ಡಾ.ಎಸ್.ನರೇಂದ್ರಕುಮಾರ್.[2]

‘ಕಾಟೇರ’ 1951 ರಲ್ಲಿ ಜಾರಿಗೆ ಬಂದ ಭೂ ಸುಧಾರಣೆ ಕಾಯ್ದೆಯನ್ನು ಎಳೆಯನ್ನಾಗಿಟ್ಟುಕೊಂಡು ಮೂಡಿಬಂದ ಚಲನಚಿತ್ರ ಜೊತೆಗೆ ಜಾತಿ ವ್ಯವಸ್ಥೆ, ಅಸ್ಪೃಶ್ಯತೆ ದಬ್ಬಾಳಿಕೆಯ ವಿರುದ್ಧ ಹೆಣೆದ ಎಪ್ಪತ್ತರ ದಶಕದ ಕಥಾಹಂದರವಾಗಿದೆ. ಅಂದು ಸವರ್ಣೀಯರು ದಮನಿತರನ್ನು, ಹಿಂದುಳಿದವರನ್ನು ಕಾಣುತ್ತಿದ್ದ ರೀತಿ, ರೈತರು ಮತ್ತು ದಲಿತರ ಮೇಲೆ ಆಗುತ್ತಿದ್ದ ದಬ್ಬಾಳಿಕೆ, ದೌರ್ಜನ್ಯಗಳ ನೈಜ ಘಟನೆಗಳ ಹುಡುಕಿ ಮಾಸ್ ರೂಪದಲ್ಲಿ ಕಥೆ ಹೆಣೆದು ಚಿತ್ರತಂಡ ತೆರೆಯ ಮೇಲೆ ತಂದಿದೆ. ಈ ಹಿಂದೆ ಕನ್ನಡದಲ್ಲಿ ಸಿದ್ದಲಿಂಗಯ್ಯ ನಿರ್ದೇಶನದ ‘ಬೂತಯ್ಯನ ಮಗ ಅಯ್ಯು’, ‘ಹೇಮಾವತಿ’, ಗಿರೀಶ್ ಕಾರ್ನಾಡ್ ನಿರ್ದೇಶನದ ‘ಸಂಸ್ಕಾರ’, ಬಿ.ವಿ ಕಾರಂತರ ‘ಚೋಮನದುಡಿ’, ಶಿವಮಣಿಯವರ ‘ದೊರೆ’, ಸ್ನೇಹಿತ್ ನತನ್ ನಿರ್ದೇಶನದ ‘ಕಂಬಾಲಹಳ್ಳಿ’ ಮುಂತಾದವು ಜಾತಿ ಆಧಾರಿತ ವಿಷಯಗಳನ್ನು ಒಳಗೊಂಡ ಸಮಾಜಮುಖಿ ಸಿನಿಮಾಗಳಾಗಿ ಶೋಷಣೆ ವಿರುದ್ಧ ಹೋರಾಡಲು ಪ್ರೇರೇಪಿಸಿವೆ. ಇವೆಲ್ಲಕ್ಕು ಭಿನ್ನವಾಗಿ ನಿರ್ದೇಶಕ ತರುಣ್ ಸುಧೀರ್ ನಿರ್ದೇಶನದ ದರ್ಶನ್ ಅವರ ಮಾಗಿದ ನಟನೆಯಲ್ಲಿ ‘ಕಾಟೇರ’ ತೆರೆಕಂಡು ಯಶಸ್ವಿಯಾಗಿ ಪ್ರದರ್ಶನಗೊಂಡಿತು.

‘ಕಾಟೇರ’ನ ಮೂಲಕ ಎಪ್ಪತ್ತರ ಕಾಲಘಟ್ಟದ ಊಳಿಗಮಾನ್ಯ ವ್ಯವಸ್ಥೆ, ಅಸ್ಪೃಶ್ಯತ ಆಚರಣೆ, ರೈತ ಹೋರಾಟ, ಜಾತೀಯತೆ, ಬ್ರಾಹ್ಮಣ್ಯದ ಕ್ರೌರ್ಯ, ಮರ್ಯಾದೆಗೇಡು ಹತ್ಯೆ, ಜಾನಪದ ಆಚರಣೆ, ಅಂತರ್ಜಾತಿ ಪ್ರೇಮ ಹಾಗೂ ಆಧುನಿಕ ಶಿಕ್ಷಣ ಪದ್ದತಿಯ ಮಹತ್ವ ಈ ಎಲ್ಲಾ ಅಂಶಗಳನ್ನು ಅಡಕವಾಗಿಸಿ ಮನಮುಟ್ಟುವ ಸಂಭಾಷಣೆಗಳನ್ನು ಮಾಸ್ತಿ ಬರೆದಿದ್ದಾರೆ. ಗಾಯಗೊಂಡ ಸಮಾಜಕ್ಕೆ ಮುಲಾಮನ್ನು ನೀಡುವ ಬಗೆಯಲ್ಲಿ ಚಲನಚಿತ್ರವಿದೆ.

ಬ್ರಾಹ್ಮಣ್ಯದ ಅಸಮಾನತೆಯೊಂದಿಗೆ ದಲಿತರಿಗೆ ಭೂ ಒಡೆತನ ನೀಡದೆ ಅತಿ ಕಡಿಮೆ ಗೇಣಿಗೆ ದುಡಿಸಿಕೊಳ್ಳುವ ಪ್ರಬಲ ಜಾತಿಯವರ ದಬ್ಬಾಳಿಕೆಯನ್ನು ಚಿತ್ರಿಸಲಾಗಿದೆ. ಜಮೀನ್ದಾರರಾದ ದೇವರಾಯ

1.ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು
2.ಪ್ರಾಧ್ಯಾಪಕರು, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ,ಮೈಸೂರು

(ಜಗಪತಿ) ಹಾಗೂ ಕಾಳೇಗೌಡ (ವಿನೋದ್ ಆಳ್ವ) ಪಾತ್ರಗಳ ಮೂಲಕ ಜಮೀನ್ದಾರಿಕೆ ಕ್ರೌರ್ಯದ ಸ್ವರೂಪವನ್ನು ನಿರೂಪಿಸಲಾಗಿದೆ. ತನ್ನನ್ನು ಪ್ರೀತಿಸಿದ ಸವರ್ಣೀಯ ಹಿನ್ನಲೆಯ ನಾಯಕಿಯ (ಆರಾಧನಾ ರಾಮ್) ಪ್ರೇರಣೆಯಿಂದ ವ್ಯವಸ್ಥೆಯ ಆಳ–ಅಗಲ, ಕಾಯ್ದೆ ಕಾನೂನಿನ ಮಹತ್ವ ಅರಿತ ನಾಯಕ ಶತಶತಮಾನಗಳ ಶೋಷಣೆಯ ಅಸಹನೆ, ಆಕ್ರೋಶಗಳನ್ನು ಕುಲುಮೆಯಲ್ಲಿ ಬೆಂದ ಮಚ್ಚಿನ ಜ್ವಾಲೆಯನ್ನು ಮೇಳೈಸಿಕೊಂಡು ಹೋರಾಟಕ್ಕಿಳಿಯುತ್ತಾನೆ. "ದೊಡ್ಡವರನ್ನು ಎದುರು ಹಾಕಿಕೊಂಡ್ರೆ ನಮ್ಮನ್ನು ಬದುಕಲು ಬಿಡ್ತಾರ" ಎನ್ನುವ ತನ್ನ ಅಕ್ಕನಿಗೆ "ಈಗೇನು ನಾವು ಬದುಕಿದ್ದೀವಿ ಅಂದ್ಕೊಂಡಿದ್ದೀಯಾ" ಎನ್ನುವ ಉತ್ತರ ನೀಡುವ ಮೂಲಕ ಸಾಂಪ್ರದಾಯಿಕ ವ್ಯವಸ್ಥೆ ಉಂಟುಮಾಡಿರುವ ಮಹಾವಂಚನೆಗಳನ್ನು ತರ್ಕ ಮಾಡುತ್ತಾನೆ. ಅಂದರೆ "ನಡಿಯೋ ದಾರಿ ನಮ್ಮದಲ್ಲ. ಉಳೊ ಭೂಮಿ ನಮ್ಮದಲ್ಲ, ಕುಡಿಯೊ ನೀರು ನಮ್ಮದಲ್ಲ, ತಿನ್ನೊ ಅನ್ನದಿಂದ ಉಡೊ ಬಟ್ಟೆತನಕ ಎಲ್ಲವನ್ನು ಜಾತಿಮೇಲಳಿತಾರೆ. ಬೆಳೆ ಬೆಳೆಯೋರ್ ನಾವು ಪಾಲ್ ತಗೊಳೋರ್ ಅವ್ರು, ಮೆಟ್ಟು ಮಾಡೋರು ನಾವು ಮೆಟ್ಕಂಡ್ ಓಡಾಡೋರು ಅವ್ರು, ಗೇಮೆ ನಮ್ಮದು ಆದಾಯ ಅವರದು. ನಾಯಿಗಳಾದ್ರು ಎಲ್ಲೆಂದರಲ್ಲಿ ಓಡಾಡ್ತವೆ ನಾವು ಅದಕ್ಕಿಂತ ಕಡೆಯಾಗೊದ್ವಾ? ಇದೆಲ್ಲ ಯಾರ್ತವ ಹೇಳ್ಕೊಳ್ಳವ? "ದೇವ್ರ್ ತವ ಎಲ್ಲಿ ಹೇಳ್ಕೊಬುಡ್ತಿವೊ ಅಂತ ದೇವಸ್ಥಾನದೊಳಕ್ಕೂ ನಮ್ಮನ್ನ ಬಿಡಕಿಲ್ಲ" ಎನ್ನುವ ಮಾತುಗಳು ಭಾರತದ ಜಾತಿವ್ಯವಸ್ಥೆಯ ಬಗೆಗಿನ ಮಾರ್ಮಿಕ ನುಡಿಗಳಾಗಿವೆ. ಈ ಸನ್ನಿವೇಶವು ದೇವನೂರ ಮಹಾದೇವರವರ 'ಗ್ರಸ್ಥರು' ಕಥೆಯ ಸನ್ನಿವೇಶವನ್ನು ಸಹ ನೆನಪಿಸುತ್ತದೆ. ಅಂದರೆ ಅನಾದಿಯಿಂದಲು ಜಾತಿ ಸಂಕೋಲೆಗೆ ಸಿಲುಕಿ ನರಳುತ್ತಿರುವ ಅಸ್ಪೃಶ್ಯತೆಯ ನೋವಿನ ಬಗ್ಗೆ ಅಸಹನೆ ಇಲ್ಲಿದೆ. ಶ್ರಮಿಕ ವರ್ಗ ತನ್ನ ಶ್ರಮದ ಮೂಲಕ ಮಾನವನ ಅಗತ್ಯತೆಗಳನ್ನು ಪೂರೈಸಿದರೂ ಮೂಲಭೂತ ಅವಶ್ಯಕತೆಗಳಿಂದ ವಂಚಿತನಾಗುತ್ತ ಬಂದಿದ್ದಾನೆ. "ಸಾರ್ವಜನಿಕ ನೀರನ್ನು ಮುಟ್ಟಲು ಬಿಡದ, ದೇವಾಲಯ ಪ್ರವೇಶಿಸಲು ನಿರಾಕರಿಸುವ, ಮನುಷ್ಯರನ್ನು ಮನುಷ್ಯರಂತೆ ನೋಡದೆ ಪಶು–ಪಕ್ಷಿಗಳಿಗಿಂತ ಕಡೆಯಾಗಿ ನೋಡುವ ಸಮಾಜವನ್ನು ಹೇಗೆ ತನ್ನ ತಾಯ್ನಾಡು ಎಂದು ಕರೆಯಲಿ, ನನಗೆ ತಾಯ್ನಾಡು ಎಂಬುದೆ ಇಲ್ಲ" ಎಂಬ ಬಾಬಾಸಾಹೇಬ್ ಅಂಬೇಡ್ಕರ್ ರವರ ಮಾತುಗಳನ್ನು ಈ ಸನ್ನಿವೇಶ ನೆನಪಿಸುತ್ತದೆ.

ಆಧುನಿಕ ಶಿಕ್ಷಣ ಪದ್ದತಿಯ ಪರಿಣಾಮವಾಗಿ ಮೇಲ್ವರ್ಗದ ಕೆಲವರಾದರೂ ವೈಚಾರಿಕ ಪ್ರಜ್ಞೆ ಹೊಂದಿರುವುದನ್ನು ನೋಡಬಹುದು. ಸಿನಿಮಾದ ಕಥಾ ನಾಯಕಿ ಶ್ಯಾನುಬೋಗರ ಮಗಳು ಪ್ರಭಾವತಿ ಪಾತ್ರ ಇದಕ್ಕೆ ಉದಾಹರಣೆ. ಶೋಷಿತ ಸಮುದಾಯಕ್ಕೆ ಜಾಗೃತಿ ಉಂಟುಮಾಡುವ ದನಿಯಾಗಿ ಈಕೆ ಕಂಡು ಬರುತ್ತಾಳೆ. ಆಧುನಿಕ ಶಿಕ್ಷಣ ಪಡೆದ ಈಕೆ ಸರ್ಕಾರಿ ಕಾಯ್ದೆ 'ಉಳುವವನೆ ಭೂಮಿಯ ಒಡೆಯ' ಯೋಜನೆ ಕುರಿತು ಶೋಷಿತ ರೈತರಿಗೆ ಅರಿವನ್ನುಂಟು ಮಾಡುತ್ತಾಳೆ. ಈ ಕಾಯ್ದೆ ಜಾರಿಯ ಹಿಂದಿನ ಶಕ್ತಿಯಾಗಿದ್ದ ಅಂದಿನ ಪ್ರಧಾನಿ ದಿವಂಗತ ಶ್ರೀಮತಿ ಇಂದಿರಾಗಾಂಧಿ ಹಾಗೂ ಕರ್ನಾಟಕದ

ಮುಖ್ಯಮಂತ್ರಿ ಡಿ. ದೇವರಾಜ ಅರಸು ರವರ ಪರಿಣಾಮಕಾರಿ ಆಡಳಿತದ ಬಗ್ಗೆ ಈ ಸಿನಿಮಾದಲ್ಲಿ ಪ್ರಶಂಸಿಸಲಾಗಿದೆ.

ಶ್ಯಾನುಬೋಗರ ಮನೆಯಲ್ಲಿ ಮಜ್ಜಿಗೆ ಕುಡಿಯಲು ದಲಿತರಿಗೆ ಪ್ರತ್ಯೇಕ ಲೋಟ ಇಟ್ಟಿರುವ ದೃಶ್ಯವನ್ನು ಇನ್ನೂ ಬಹಳ ಪರಿಣಾಮಕಾರಿಯಾಗಿ ತೋರಿಸಬಹುದಿತ್ತು. ಕಾಟೇರನೊಂದಿಗೆ ದಲಿತ ಪುಟ್ಟ ಬಾಲಕ ಶ್ಯಾನುಭೋಗರ ಮನೆಯ ಬಳಿ ಬಂದ ಸಂದರ್ಭದಲ್ಲಿನ ಘಟನೆ. ತಮ್ಮ ಮನೆ ಬಳಕೆಯ ಲೋಟದಲ್ಲಿ ನಾಯಕಿ ಅವರಿಗೆ ಮಜ್ಜಿಗೆ ನೀಡಲು ಮುಂದಾಗುತ್ತಾಳೆ. ಅದನ್ನು ಕಾಟೇರ ನಿರಾಕರಿಸಿ ಪ್ರತ್ಯೇಕ ಮೀಸಲಿರಿಸಿದ ಲೋಟ ತೆಗೆದುಕೊಳ್ಳಲು ಮುಂದಾಗುತ್ತಾನೆ. ಅಷ್ಟರಲ್ಲಿ ಬಾಲಕ ನಾಯಕಿಯ ಕೈಯಲಿದ್ದ ಲೋಟವನ್ನು ಮುಟ್ಟಿ ಮಜ್ಜಿಗೆ ಕುಡಿಯಲು ಯತ್ನಿಸುತ್ತಾನೆ. ಅಷ್ಟರಲ್ಲಿ ಶ್ಯಾನುಭೋಗ ಅದನ್ನು ನೋಡಿ ಕೋಪಗೊಂಡು ಬಾಲಕನ್ನು ಶಿಕ್ಷಿಸಲು ಮುಂದಾಗುತ್ತಾನೆ. ಜಾತಿ ಕಲ್ಪನೆಯ ಅರಿವು ಇಲ್ಲದ ಮಗುವಿನ ಮೇಲೂ ಸಹ ನಿಷ್ಕಾರುಣ್ಯವಾಗಿ ಜಾತಿ ಮನಸ್ಥಿತಿ ದೌರ್ಜನ್ಯವೆಸಗುತ್ತದೆ. ನಾಯಕಿ ಪ್ರಭಾವತಿ ತನ್ನ ಪ್ರೀತಿಗಾಗಿ ಮತ್ತು ಶಿಕ್ಷಣ ಪಡೆದ ಕಾರಣ ಜಾತಿ ವ್ಯವಸ್ಥೆ ವಿರೋಧಿ ಗುಣಗಳನ್ನು ರೂಢಿಸಿಕೊಂಡಿರುತ್ತಾಳೆ. ನಾಯಕ ಆ ಲೋಟ ಮುಟ್ಟುವ ಮೊದಲೇ ಬಾಲಕ ಅದನ್ನು ಮುಟ್ಟಿ ಶ್ಯಾನುಬೋಗರ ಕೆಂಗಣ್ಣಿಗೆ ಗುರಿಯಾಗುತ್ತಾನೆ, ನಾಯಕನೆ ಆ ಲೋಟವನ್ನು ಮುಟ್ಟಿ ನಿಂದನೆಗೆ ಒಳಗಾಗಿದ್ದರೆ ಅಸ್ಪೃಶ್ಯತೆಯ ಕಾರಳತೆ ಮತ್ತಷ್ಟು ಬಯಲಾಗುತ್ತಿತ್ತು.

ಸಮಕಾಲಿನ ಸಂದರ್ಭದಲ್ಲಿ ಸಾರ್ವಜನಿಕ ಸ್ಥಳವಾದ ಹೋಟಲ್‌ಗಳಲ್ಲಿ ದಲಿತರಿಗೆ ಪ್ರತ್ಯೇಕ ಲೋಟ, ತಟ್ಟೆಯನ್ನು ಆಚೆ ಇಟ್ಟು ಅವರ ಬಳಕೆಗೆ ಮೀಸಲಿರಿಸಲಾಗಿರುತ್ತದೆ. ಹಾಗೆಯೇ ಗ್ರಾಮೀಣ ಭಾಗಗಳಲ್ಲಿ ನಡೆಯುವ ಸಭೆ, ಸಮಾರಂಭ, ಪಂಚಾಯಿತಿಗಳಲ್ಲಿ ಸವರ್ಣಿಯರಿಂದ ದಲಿತರು ಅಂತರ ಕಾಯ್ದುಕೊಳ್ಳುವ ಶೋಚನೀಯ ಪರಿಸ್ಥಿತಿ ಇದೆ. ದಲಿತ ಬಾಲಕನೊರ್ವ ದೇವರ ದಂಡವನ್ನು ಮುಟ್ಟಿ ಮೈಲಿಗೆಯಾಯಿತೆಂದು, ಬಾಲಕನ ಕುಟುಂಬಕ್ಕೆ ಸಾಮಾಜಿಕ ಬಹಿಷ್ಕಾರ ಮತ್ತು ದಂಡ ವಸೂಲಿ ಮಾಡಿದ ಪ್ರಕರಣ, ದಲಿತನ ಮೇಲೆ ಮೂತ್ರ ವಿಸರ್ಜಿಸಿದ ಪ್ರಕರಣ, ದಲಿತ ದೇವಸ್ಥಾನ ಪ್ರವೇಶಿಸಿದನೆಂದು ಆತನನ್ನು ಥಳಿಸಿ ಬೆತ್ತಲೆ ಮೆರವಣಿಗೆ ಮಾಡಿದ ಘಟನೆ, ಸವರ್ಣೀಯರ ಬೀದಿಗೆ ದಲಿತ ಪ್ರವೇಶಿಸಿದ ಕಾರಣಕ್ಕೆ ಆತನನ್ನು ಹೊಡೆದು ದಂಡ ಹಾಕಿದ ಘಟನೆಗಳು ಪ್ರಸ್ತುತದಲ್ಲಿಯೂ ಇರುವ ಅಸ್ಪೃಶ್ಯತೆ ಆಚರಣೆಯ ಭೀಕರತೆಯನ್ನು ತೆರೆದಿಡುತ್ತದೆ.

"ಅವರು ಜೀವ ಇರುವ ಚಪ್ಪಲಿಗಳು, ನಾವು ಬದುಕಬೇಕು ಅಂದ್ರೆ ಅವರನ್ನು ಮೆಟ್ಟಲೆಬೇಕು" ಎಂದು ಶ್ಯಾನುಬೋಗನು ಹೇಳುವಾಗ ಅಸ್ಪೃಶ್ಯರನ್ನ ಹೇಗೆ ಮಾನಸಿಕವಾಗಿ ಕುಗ್ಗಿಸಿ, ಗುಲಾಮರನ್ನಾಗಿ ಮಾಡಿ ತಮ್ಮ ಕಪಿಮುಷ್ಠಿಯಲ್ಲಿ ಇಟ್ಟುಕೊಂಡಿವೆ ಎಂಬುದು ಅರ್ಥವಾಗುತ್ತದೆ. ತಮ್ಮ ಘನತೆಯ ಬದುಕಿನ ಅರಿವಿರದ ಶೋಷಿತರು ವಿದ್ಯೆ, ಹಣ, ಅಧಿಕಾರದಿಂದ ವಂಚಿತರಾಗಿ ಬ್ರಾಹ್ಮಣ್ಯ ಸೃಷ್ಟಿಸಿದ ಮೌಢ್ಯದ

ಕಂದಕಕ್ಕೆ ಸಿಲುಕಿ ನರಳುವಂತಾಗಿದೆ. ಇವರಿಗೆ ಇತಿಹಾಸ ಪ್ರಜ್ಞೆಯ ಅರಿವಿರದ ಕಾರಣ ಶೋಷಕರು ಎಲ್ಲಿ ಬೇಕೊ ಅಲ್ಲಿ ಮೆಟ್ಟುಗಳಾಗಿ ಬಳಸಿ ಇವರನ್ನು ಬಿಸಾಡುತ್ತಿದ್ದಾರೆ.

ಪ್ರಬಲ ಜಾತಿಯ ಜಮಿನ್ದಾರರ ಹೊಲಗದ್ದೆಗಳಲ್ಲಿ ಕೂಲಿ ಮಾಡುವ ದಮನಿತ ಮಹಿಳೆಯರ ಅಸಹಾಯಕ ಸ್ಥಿತಿಯನ್ನು ಚಲನಚಿತ್ರವು ಕಟ್ಟಿಕೊಡುತ್ತದೆ. ತನ್ನ ಅಕ್ಕನ ಎದೆಯ ಹಾಲು ನೋಡಬೇಕೆನ್ನುವ ಮಾರನ ಕಣ್ಣು ಗುಡ್ಡೆಯನ್ನು ಕಾಟೇರ ಕಿತ್ತು ಬಿಸಾಕುತ್ತಾನೆ. ದಲಿತರ ಬಡತನವನ್ನೇ ಬಂಡವಾಳ ಮಾಡಿಕೊಂಡು ಮೇಲ್ವರ್ಗದ ಪುರುಷರು ಮಹಿಳೆಯರು ದುಡಿಯುವ ಸ್ಥಳಗಳಲ್ಲಿ ಅವರ ಮೇಲಾಗುವ ಲೈಂಗಿಕ ದೌರ್ಜನ್ಯ, ಪೀಡನೆಯಂತಹ ಘಟನೆಯನ್ನು ಈ ದೃಶ್ಯ ನೆನಪಿಸುತ್ತದೆ. ಇಂತಹ ಸನ್ನಿವೇಶಗಳು ಎದುರಾಗಲು ಕಾರಣವೇನು? ಎಂಬುದನ್ನು ದಮನಿತ ಸಮಾಜ ಪ್ರಜ್ಞಾಪೂರ್ವಕವಾಗಿ ಚಿಂತಿಸಬೇಕು. ತಮ್ಮಲ್ಲಿನ ಅಜ್ಞಾನ, ಬಡತನ, ಇತಿಹಾಸ ಪ್ರಜ್ಞೆಯ ಕೊರತೆಯಿಂದ ತುಳಿತಕ್ಕೆ ಒಳಗಾಗುತ್ತಿದ್ದೇವೆಂಬ ಅರಿವು ಇರಬೇಕು. ಇದಕ್ಕಾಗಿ ಶಿಕ್ಷಣ ಪಡೆದು ಸಂವಿಧಾನದ ಹಕ್ಕುಗಳ ಮೂಲಕ ಸ್ವಾಭಿಮಾನದ ಘನತೆಯ ಜೀವನ ರೂಪಿಸಿಕೊಳ್ಳುವ ಕಡೆಗೆ ಚಿಂತನೆ ನಡೆಸುವ ಅನಿವಾರ್ಯತೆ ಇದೆ.

ಸಿನಿಮಾದಲ್ಲಿನ ಮತ್ತೊಂದು ಅದ್ಭುತ ಪಾತ್ರ ಚೊಂಗ್ಲನದು, ಅಂತರಾಷ್ಟ್ರೀಯ ಪ್ರಶಸ್ತಿ ಪಡೆದ ಹಿರಿಯ ನಟ ವೈಜನಾಥ್ ಬಿರಾದಾರ್ ಈ ಪಾತ್ರ ನಿರ್ವಹಿಸಿದ್ದಾರೆ. ಚೊಂಗ್ಲ ಕಾಟೇರನ ಎಲ್ಲಾ ಹೋರಾಟಗಳಿಗೂ ಬೆಂಬಲವಾಗಿ ಜೊತೆ ನಿಲ್ಲುತ್ತಾನೆ. ಈತ ಮೂಕನಾಗಿದ್ದರೂ ಪೌರಾಣಿಕ ಪಾತ್ರವಾದ ಹಿರಣ್ಯಕಶ್ಯಪುವಿನ ಪಾತ್ರದಲ್ಲಿ ಅಭಿನಯಿಸಬೇಕೆಂಬ ಮಹದಾಸೆ. ಮಾತು ಬಾರದ ಕಾರಣ ಈತನ ನಾಟಕಾಭಿನಯಕ್ಕೆ ಅವಕಾಶ ಸಿಕ್ಕಿರುವುದಿಲ್ಲ. ಈತನ ಆಸೆಯನ್ನು ಕಾಟೇರ ಪರೆದೆಯ ಹಿಂದೆ ಹಿನ್ನಲೆ ಧ್ವನಿ ನೀಡುವ ಮೂಲಕ ಪೂರೈಸುತ್ತಾನೆ. ಚೊಂಗ್ಲನ ಅಭಿನಯ ಕಂಡು ಇಡೀ ಊರೆ ಚಪ್ಪಾಳೆಯ ಮಳೆಗೈಯುವ ಮೂಲಕ ಪ್ರಶಂಸಿಸುತ್ತಾರೆ. ಮಾತು ಬಾರದ ಚೊಂಗ್ಲನಿಗೆ ಧ್ವನಿಯಾದ ಕಾಟೇರ ತನ್ನ ಸಮುದಾಯವನ್ನು ಬಂಧಿಸಿರುವ ಎಲ್ಲಾ ಸಂಕೋಲೆಗಳಿಂದ ಮುಕ್ತಗೊಳಿಸುವ ಹೋರಾಟದ ಧ್ವನಿಯಾಗಿ ಕಾಣುತ್ತಾನೆ. ಧ್ವನಿ ಇಲ್ಲದ ಸಮುದಾಯಕ್ಕೆ ಧ್ವನಿಯಾಗಿ ನಿಲ್ಲುವ ಮೂಲಕ ತನ್ನೂರಿನ ಜನರ ಜೀವ ರಕ್ಷಣೆ ಮಾಡುತ್ತಾನೆ. ತನ್ನೂರಿನ ಜನರ ಪ್ರಾಣ ತೆಗೆಯಲು ಬಂದ 107 ಜನರ ತಲೆಯನ್ನು ತೆಗೆದು ಕುಲುಮೆಯಲ್ಲಿ ತಾನು ತಯಾರಿಸಿದ ಕತ್ತಿಗೆ ರಕ್ತತರ್ಪಣವಾಗಿ ಅರ್ಪಿಸುತ್ತಾನೆ.

'ಕಾಟೇರ' ಚಲನಚಿತ್ರವು ಮರ್ಯಾದೆಗೇಡಿ ಹತ್ಯೆ ವಿಷಯವನ್ನೂ ಒಳಗೊಂಡಿದೆ. ಬ್ರಾಹ್ಮಣರ ಹೆಣ್ಣು ಮಗಳು (ಪ್ರಭಾವತಿ) ತಳ ಸಮುದಾಯದ ಕಾಟೇರನನ್ನು ಪ್ರೀತಿಸಿದ ಕಾರಣಕ್ಕಾಗಿ ತನ್ನ ತಮ್ಮನಿಂದಲೇ ಈಕೆ ಹತ್ಯೆಗೀಡಾಗುತ್ತಾಳೆ. ತನ್ನವರನ್ನು ತೊರೆದು ಕಾಟೇರನ ಜೊತೆ ಹೊರಟು ಹೋಗುವ ಕಾರಣ ಆಕೆಯ ತಂದೆ ತಲೆಯ ಮೇಲೆ ನೀರನ್ನು ಸುರಿದುಕೊಂಡು ಮಗಳು ತನ್ನ ಪಾಲಿಗೆ ಸತ್ತಳೆಂದು ತರ್ಪಣ ಬಿಟ್ಟು ಕಠೋರ ನಿಲುವು ತಾಳುತ್ತಾನೆ. ಜಾತಿ ಶ್ರೇಷ್ಠತೆ ಎಂಬ ಕ್ರೌರ್ಯವನ್ನೆ

ರಕ್ತಗತವಾಗಿಸಿಕೊಂಡಿದ್ದ ನಾಯಕಿಯ ತಮ್ಮ ಪದ್ದು ಅಕ್ಕನ ಜೊತೆ ಚೆನ್ನಾಗಿರುವಂತೆ ನಟಿಸಿ, ಸಂಚಿನ ಮೂಲಕ ಆಕೆಯನ್ನು ಊರ ಹೊರಗೆ ಕರೆದೊಯ್ದು ಕೊಲ್ಲುತ್ತಾನೆ. ಈ ಮೂಲಕ ಮನುಷ್ಯತ್ವಕ್ಕಿಂತ ಜಾತಿಯೆ ದೊಡ್ಡದು ಎಂಬ ಜಾತಿ ಶ್ರೇಷ್ಠತೆಯ ಅಂಧಾಭಿಮಾನ ಮೆರೆಯುತ್ತಾನೆ. "ನೀನು ನಡೆತೆಗೆಟ್ಟವಳಾಗಿದ್ದರು ಒಪ್ಪಿಕೊಳ್ತಿದ್ದೆ. ಆದರೆ ಜಾತಿ ಗೆಟ್ಟೆಯಲ್ಲೆ" ಎಂದು ಹೌಹಾರುತ್ತ ತನ್ನ ಕ್ರೌರ್ಯ ಹೊರಹಾಕುತ್ತಾನೆ. ಪ್ರಸ್ತುತದಲ್ಲಿ ಹಲವಾರು ಮಾರ್ಯಾದೆಗೇಡು ಹತ್ಯೆ ಪ್ರಕರಣಗಳ ಭೀಕರತೆಯ ಹಿಂದಿನ ಕಾರಣವನ್ನು ಇದು ನೆನಪಿಸುತ್ತದೆ.

ಜೈಲು ಸೇರಿದ್ದ ಕಾಟೇರ ಸುಮಾರು 15 ವರ್ಷಗಳ ನಂತರ ಫೆರೋಲ್ ಮೂಲಕ ಜೈಲಿನಿಂದ ಹೊರಬರುತ್ತಾನೆ. ಬಂದವನೆ ಪಕ್ಕದ ಊರಿನ ಮಾರಿ ಜಾತ್ರೆಗೆ ಹೋಗುತ್ತಾನೆ. ಎಲ್ಲರು ಆತನನ್ನು ಹೊಲೆಮಾರಿಯನ್ನು ಹೊತ್ತೊಯ್ಯಲು ಬಂದಿದ್ದಾನೆಂದು ಭಾವಿಸಿದ್ದರು. ಆದರೆ ಹೊಲೆಮಾರಿ ಎಂಬ ವಂಚಕ ಆಟದ ಫಲದಿಂದಲೇ ಸಾಮಾಜಿಕವಾಗಿ ಏರುಪೇರು, ಅಸಮಾನತೆಗಳು ತಾಂಡವವಾಡಲು ಮೂಲ ಕಾರಣ ಎಂಬುದನ್ನು ಕಾಟೇರ ತನ್ನ ಅನುಭವದ ಮೂಲಕ ಅರಿತುಕೊಂಡಿರುತ್ತಾನೆ. ಹೊಲೆಮಾರಿ ಎಂಬ ಪ್ರಾಣಿಬಲಿ ಸಂಪ್ರದಾಯ ತೊರೆದು ತನ್ನ ಜೀವನ ಸಂಗಾತಿಯ ಪ್ರಾಣ ತೆಗೆದ ಬ್ರಾಹ್ಮಣ್ಯದ ಪ್ರತೀಕ ಪದ್ದುವಿನ ತಲೆಯನ್ನು ಕಾಟೇರ ಕತ್ತರಿಸುತ್ತಾನೆ. ಪದ್ದು ಹತನಾದ ನಂತರ ಕಾಟೇರ ನೆರೆದಿದ್ದ ಜನರಿಗೆ ಜಾತಿ ಹುಟ್ಟಿದ್ದು ಹೇಗೆ, ಅದು ಮಾನವ ಕುಲವನ್ನೆ ಕೊಲ್ಲುವ ಮಟ್ಟಕ್ಕೆ ವಿಕೃತವಾಗಿ ಬೆಳೆದದ್ದು ಹೇಗೆ ಎಂಬುದನ್ನು ಹೇಳುವ ಮೂಲಕ ಜಾತಿಯ ಸಂಕೋಲೆಗಳಿಂದ ಈ ಸಮಾಜ ಹೊರಬರಬೇಕಾದ ಅಗತ್ಯತೆಯನ್ನು ಒತ್ತಾಯಿಸುತ್ತ ಎಲ್ಲರತ್ತ ಕೈಮುಗಿಯುವ ಮೂಲಕ ಸಿನಿಮಾ ಮುಕ್ತಾಯವಾಗುತ್ತದೆ. ಜಾತಿಗಿಂತ ಮಾನವೀಯತೆ ದೊಡ್ಡದು ಎಂಬ ಸಂದೇಶ ಚಲನಚಿತ್ರದಲ್ಲಿದೆ.

ಈ ಸಿನಿಮಾ ಕೆಲವು ಮಿತಿಗಳನ್ನು ಒಳಗೊಂಡಿದೆ. ಈ ಸಿನಿಮಾ ಶೋಷಿತ ಸಮುದಾಯಗಳ ವಸ್ತು ವಿಷಯ ಹೊಂದಿದ್ದರು ವಾಣಿಜ್ಯಾತ್ಮಕ ಮತ್ತು ಹೆಚ್ಚು ಜನಪ್ರಿಯಗೊಳಿಸುವ ಉದ್ದೇಶದಿಂದ ಮೂಡಿಬಂದಿದೆ. ಮಚ್ಚು, ಕತ್ತಿಗಳ ಅರ್ಭಟಕ್ಕೆ ರಕ್ತದ ಹೊಳೆಯೇ ಹರಿದಿದೆ. ಹಿಂಸೆಗೆ ಸ್ವಲ್ಪ ಕಡಿವಾಣ ಹಾಕಿ ಸಾಮಾಜಿಕ ಸಂಘರ್ಷದ ಗಾಢತೆಯನ್ನು ತೆರೆಯಲ್ಲಿ ಹಿಡಿಯಬಹುದಿತ್ತು.

ಸಿನಿಮಾದಲ್ಲಿ ಬಹುಪಾಲು ನಾಯಕನೊಬ್ಬನೆ ಪ್ರಬಲ ಜಾತಿಯ ಕ್ರೌರ್ಯಗಳ ವಿರುದ್ಧ ಸೆಣಸುತ್ತಾನೆ. ಅಂದಿನ ದಶಕದಲ್ಲಿ ದಲಿತರು ಹಾಗೂ ರೈತರ ಮೇಲೆ ಆಗುತ್ತಿದ್ದ ಶೋಷಣೆಗಳ ವಿರುದ್ಧ ಅಸಂಖ್ಯಾತ ದಲಿತರು, ರೈತ ಬಂಧುಗಳು ಸಂಘರ್ಷಕ್ಕೆ ದುಮುಕಿದ್ದರು. ಹೋರಾಟದಲ್ಲಿ ಹೆಚ್ಚಿನ ಸಂಖ್ಯೆಯ ರೈತರ ಭಾಗವಹಿಸುವಿಕೆಯನ್ನ ಸಮರ್ಪಕವಾಗಿ ಕಟ್ಟುಕೊಡುವಲ್ಲಿ ಸಿನಿಮಾ ತಂಡ ವಿಫಲವಾಗಿದೆ. 70ರ ದಶಕದಲ್ಲಿ ಚಳುವಳಿಯ ವಿಷಯದಲ್ಲಿ ರೈತ ಸಂಘಕ್ಕೆ ದಲಿತ ಸಂಘರ್ಷ ಸಮಿತಿ ಹಿರಿಯಣ್ಣನಂತೆ ಬೆಂಬಲವಾಗಿ ನಿಂತಿತ್ತು. ರೈತ ಸಮುದಾಯದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ

ಸ್ಥಿತಿಗತಿಯ ಬಗ್ಗೆ ಮಾತನಾಡುತ್ತ ಬಹುತೇಕ ಹೋರಾಟಗಳಲ್ಲಿ ಭಾಗಿಯಾಗಿತ್ತು. ಆದರೆ 'ಕಾಟೇರ'ದಲ್ಲಿ ರೈತ ಚಳುವಳಿಯ ಜೊತೆ ಜೊತೆಗೆ ಅಸ್ಪೃಶ್ಯತೆ ವಿರುದ್ಧ ಹೋರಾಟದ ಕಿಚ್ಚು ಹಚ್ಚಿದ ದಸಂಸದ ಬಗ್ಗೆ ಇಲ್ಲಿ ಪ್ರಸ್ತಾಪಿಸಿಲ್ಲ. ದಸಂಸ ಮತ್ತು ರೈತ ಚಳುವಳಿಯ ಯಾವುದೇ ಮುಂಚೂಣಿ ನಾಯಕರನ್ನು ಇಲ್ಲಿ ಹೆಸರಿಸಿಲ್ಲ. ಭೂ ಸುಧಾರಣೆಯ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಲ್ಲಿ ಯಶಸ್ವಿಯಾದ ಇಂದಿರಾಗಾಂಧಿ ಮತ್ತು ದೇವರಾಜ ಅರಸುರವರನ್ನು ಸ್ಮರಿಸಿದಂತೆ, ತಮ್ಮ ಬದುಕಿನ ಉದ್ದಕ್ಕೂ ಜಾತಿ ಪದ್ಧತಿ ವಿರುದ್ಧ ಹೋರಾಟ ಮಾಡಿದ ಹಾಗೂ ಭಾರತಕ್ಕೆ ಸಂವಿಧಾನ ನೀಡಿದ ಅಂಬೇಡ್ಕರ್ ರವರನ್ನು ಈ ಸಂದರ್ಭದಲ್ಲಿ ಸ್ಮರಿಸಲು ಸಾಕಷ್ಟು ಅವಕಾಶಗಳಿದ್ದವು.

ಶತಶತಮಾನಗಳಿಂದ ಬ್ರಾಹ್ಮಣ್ಯವು ಪೋಷಿಸುತ್ತ ಬಂದ ಜಾತೀಯತೆ, ಅಸ್ಪೃಶ್ಯತೆ ಜಮೀನ್ದಾರರ ಅಟ್ಟಹಾಸಕ್ಕೆ ಬಲಿಯಾದ ಅಸಹಾಯಕ ಸಮುದಾಯಗಳ ಮನೋಭಾವನೆಯನ್ನು ಕಾಟೇರ ವಿರೋಧಿಸುತ್ತದೆ. ರಕ್ತಪಿಪಾಸು ತೃಷೆಗೆ ಬಳಕೆಯಾಗುತ್ತ ಬಂದ ಮಚ್ಚು, ಕೊಡಲಿ, ಕತ್ತಿ, ಚಾಕುಗಳು ಕಾಟೇರನ ಕುಲುಮೆಯಲ್ಲಿ ಬೆಂದು ಹದಗೊಂಡು ಮನುಷ್ಯತ್ವದ ಪರ ಕೆಲಸ ಮಾಡುತ್ತವೆ. ಸಂಪ್ರದಾಯದ ಹೆಸರಿನ ಮೂಢ ಆಚರಣೆಗಳು, ಒಡೆದು ಆಳುವ ನೀತಿ, ಶ್ರೇಷ್ಠತೆಯ ವ್ಯಸನವನ್ನು ಹುಟ್ಟು ಹಾಕಿರುವ ಜಾತಿ ವ್ಯವಸ್ಥೆ, ನೆಲಮೂಲದ ಜನರನ್ನು ಶೋಷಣೆ ಮಾಡಲು ಬಿತ್ತಿದ ಮೂಢನಂಬಿಕೆಗಳನ್ನು ಕಾಟೇರ ತಯಾರಿಸಿದ ಶುದ್ಧ ದೇಶಿ ಕತ್ತಿ ಒಂದೇ ಬಲಿಷ್ಠ ಹೊಡೆತಕ್ಕೆ ಕತ್ತರಿಸುತ್ತದೆ. ಕಾಟೇರ ತನ್ನ ಕುಲುಮೆಗೆ ಬಿದ್ದ ಕಬ್ಬಿಣವನ್ನು ಕಾಯಿಸಿ, ಹದ ಮಾಡಿ ಅವುಗಳಿಗೆ ಒಂದು ರೂಪ ಕೊಡುವಂತೆ, ಸಮಾಜದ ಅನೇಕ ಅಂಕುಡೊಂಕುಗಳನ್ನು ತನ್ನ ಹೋರಾಟದ ಮೂಲಕ ಹೋಗಲಾಡಿಸುವ ಪ್ರಯತ್ನ ಮಾಡುತ್ತಾನೆ. ಒಟ್ಟಾರೆ ಜಾತ್ಯತೀತ ಆಶಯವನ್ನು ಮೂಡಿಸುವ ಸಿನಿಮಾಗಳ ಬದ್ಧತೆಯ ಚಲನಚಿತ್ರವಾಗಿ ಕಾಟೇರ ಮೂಡಿಬಂದಿದೆ. ಕನ್ನಡ ಚಲನಚಿತ್ರ ರಂಗದ ಈ ಪ್ರಯೋಗ ಮೆಚ್ಚುವಂತಹುದು.

**ಪರಾಮರ್ಶನ ಗ್ರಂಥಗಳು :**


೧. ಖ್ವಾಜಾ ಅಹಮ್ಮದ್ ಅಬ್ಬಾಸ್, ಚಲನಚಿತ್ರಗಳ ನಿರ್ಮಾಣ, ಅನುವಾದ– ಪ್ರೇಮ ಕಾರಂತ್, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ೨೦೨೧

೨. ದೇವನೂರು ಮಹಾದೇವ, ದ್ಯಾವನೂರು ಹಾಗೂ ಒಡಲಾಳ, ಪುಸ್ತಕ ಪ್ರಕಾಶನ, ಸರಸ್ವತಿಪುರಂ, ಮೈಸೂರು, ೨೦೨೨

೩. ಪ್ರೊ.ಎಂ.ಜಿ ಮಂಜುನಾಥ್, ಕನ್ನಡ ಸಾಹಿತ್ಯ ಮತ್ತು ಕನ್ನಡ ಸಿನಿಮಾ, ಪ್ರಧಾನ ಸಂಪಾದಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು, ೨೦೨೧

೪. ಶಿವಾಜಿ ಗಣೇಶನ್, ದಲಿತ ಚಳವಳಿ ಹೆಜ್ಜೆಗಳು, ಬೆವರ ಹನಿ ಪ್ರಕಾಶನ, ತುಮಕೂರು, ೨೦೨೧

೫. ಸುಂಕಂ ಗೋವರ್ಧನ, ಸಾಹಿತ್ಯ ಅನುಭವ ವಿಸ್ತರಣೆ ಹಾಗೂ ಪರ್ಯಾಯ ಚಲನಚಿತ್ರಗಳು, ಕನ್ನಡ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಬೆಂಗಳೂರು–೨೦೨೧